438

ಕರ್ನಾಟಕ ಸರ್ಕಾರ

ಸಂಖ್ಯೆ: ಆರ್‌ಡಿ 47 ಎಡಿಇ 92.

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 17-1-1994.

—: ಸುತ್ತೋಲೆ :—

ವಿಷಯ:— ತುಮಕೂರು ಜಿಲ್ಲೆಯ ಪಾವಗಡದಲ್ಲಿ ದಿನಾಂಕ:
16-2-87 ರಂದು ಪೋಲೀಸರು ನಡೆಸಿದ
ಗೋಲಿಬಾರ್ ಪ್ರಕರಣ — ಶ್ರೀ ಬಿ.ಕೆ.
ಸೋಮಶೇಖರ್ ವಿಚಾರಣಾ ಆಯೋಗದ ವರದಿಯ
ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಬಗ್ಗೆ.

ooooooo

ರಾಜ್ಯದಲ್ಲಿಯ ಕೆಲವು ಕಾರ್ಯನಿರ್ವಾಹಕ ದಂಡಾಧಿಕಾರಿಗಳ ಮತ್ತು ಪೋಲೀಸ್ ಅಧಿಕಾರಿಗಳ ನಡುವೆ ಸಮನ್ವಯತೆ ತೃಪ್ತಿಕರವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಇನ್ನು ಮುಂದಾದರೂ ಕಾನೂನು ಮತ್ತು ಶಾಂತಿ ಪಾಲನೆಯನ್ನು ಸುವ್ಯವಸ್ಥಿತವಾಗಿ ಹಾಗೂ ಯಾವುದೇ ಅಹಿತಕರ ಘಟನೆಗಳು ಜರುಗದಂತೆ ನೋಡಿಕೊಳ್ಳಲು, ಕಾರ್ಯನಿರ್ವಾಹಕ ದಂಡಾಧಿಕಾರಿಗಳು ಮತ್ತು ಪೋಲೀಸ್ ಅಧಿಕಾರಿಗಳ ನಡುವೆ ಪರಸ್ಪರ ಹೊಂದಾಣಿಕೆ ಹಾಗೂ ಸಮನ್ವಯತೆ ಉತ್ತಮವಾಗಿರುವಂತೆ ನೋಡಿಕೊಳ್ಳಲು ಹಾಗೂ ಜಿಲ್ಲಾಧಿಕಾರಿಗಳವರೆಗಿನ ಎಲ್ಲಾ ದಂಡಾಧಿಕಾರಿಗಳ ಪ್ರಭಾರ ವ್ಯವಸ್ಥೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವಂತೆ ಎಲ್ಲಾ ಕಾರ್ಯನಿರ್ವಾಹಕ ದಂಡಾಧಿಕಾರಿಗಳಿಗೆ ಮತ್ತು ಜಿಲ್ಲಾ ದಂಡಾಧಿಕಾರಿಗಳಿಗೆ ಸೂಚನೆ ನೀಡುವಂತೆ ಎಲ್ಲಾ ವಿಭಾಗಾಧಿಕಾರಿಗಳಿಗೆ ಸೂಚಿಸಲಾಗಿದೆ.

(ಸಹಿ).
(ಸಿ.ಟಿ.ಬೆಂಜಮಿನ್),
ಆಯುಕ್ತರು ಮತ್ತು ಸರ್ಕಾರದ ಕಾರ್ಯದರ್ಶಿ,
ಕಂದಾಯ ಇಲಾಖೆ.

:: ಯಥಾ ನಕಲು ::

3-3-94

ನಂ.ಎಂಎಜಿ 737:93-94.

ಜಿಲ್ಲಾಧಿಕಾರಿಗಳ ಕಛೇರಿ,
ಹಾಸನ ಜಿಲ್ಲೆ, ಹಾಸನ.
ದಿನಾಂಕ: 21-2-1994.

ನಕಲನ್ನು ಆರಕ್ಷಕ ಅಧೀಕ್ಷಕರು, ಹಾಸನ, ಉಪ ವಿಭಾಗಾಧಿಕಾರಿಗಳು, ಹಾಸನ:ಸಕಲೇಶಪುರ ಹಾಗೂ ಎಲ್ಲಾ ತಾಲ್ಲೂಕು ದಂಡಾಧಿಕಾರಿಗಳವರಿಗೆ ಸೂಕ್ತ ಕ್ರಮಕ್ಕಾಗಿ.

ಜಿಲ್ಲಾಧಿಕಾರಿಗಳ ಪರವಾಗಿ,
ಹಾಸನ ಜಿಲ್ಲೆ, ಹಾಸನ.